
ಗದ್ಯ

# ನಮ್ಮ ರಾಷ್ಟ್ರೀಯ ಪ್ರಾಣಿ - ಹುಲಿ



ಪ್ರಾಣಿಗಳಲ್ಲಿ ಎರಡು ವಿಧ. ಸಾಕು ಪ್ರಾಣಿಗಳು ಮತ್ತು ಕಾಡು ಪ್ರಾಣಿಗಳು. ಹಸು, ಎಮ್ಮೆ, ಕುರಿ, ಮೇಕೆ, ನಾಯಿ, ಕುದುರೆ, ಕತ್ತೆ ಮುಂತಾದವು ಸಾಕು ಪ್ರಾಣಿಗಳು. ಆನೆ, ಸಿಂಹ, ಹುಲಿ, ಚಿರತೆ, ಕರಡಿ, ನರಿ, ತೋಳ, ಜಿರಾಫೆ, ಜಿಂಕೆ ಮುಂತಾದವು ಕಾಡು ಪ್ರಾಣಿಗಳು.

ಕಾಡು ಪ್ರಾಣಿಗಳಲ್ಲಿ ಹುಲಿ ನಮ್ಮ ರಾಷ್ಟ್ರೀಯ ಪ್ರಾಣಿ. ಹುಲಿಗೆ ಮೈ ಮೇಲೆ ಹಳದಿ ಮತ್ತು ಕಂದು ಬಣ್ಣದ ಕಪ್ಪು ಪಟ್ಟಿಗಳಿರುತ್ತವೆ. ಹುಲಿಯ ನೋಟ ಹಾಗೂ ನಡಿಗೆ ಗಂಭೀರವಾಗಿರುತ್ತದೆ. ಕಣ್ಣು ಕಿವಿಗಳು ತುಂಬಾ ಚುರುಕಾಗಿರುತ್ತವೆ. ಇದು ಅತ್ಯಂತ ಧೈರ್ಯ ಸ್ವಭಾವದ ಪ್ರಾಣಿ. ತನ್ನ ಮೈಬಣ್ಣ ಹಾಗು ಬಿಳಿ ಮೀಸೆಗಳಿಂದ ಹೆಚ್ಚು ಆಕರ್ಷಕವಾಗಿ ಕಾಣುತ್ತದೆ. ಆದ್ದರಿಂದ ಇದನ್ನು 'ವನರಾಜ' ಎನ್ನುತ್ತಾರೆ.

ಪ್ರಾಯದ ಹುಲಿ ಸುಮಾರು ಎರಡೂವರೆಯಿಂದ ಮೂರು ಮೀಟರ್‌ಗಳಷ್ಟು ಉದ್ದವಿರುತ್ತದೆ. ಇದರ ತೂಕ ೧೫೦ ರಿಂದ ೨೫೦ ಕಿಲೋಗ್ರಾಂಗಳು. ಗಂಡು ಹುಲಿ ಗಾತ್ರದಲ್ಲಿ ದೊಡ್ಡದಿರುತ್ತದೆ. ಇದರ ಆಹಾರ ಮಾಂಸ. ಬೇಟೆಯಾಡಲು ಗಟ್ಟಿಯಾದ ಹಾಗೂ ಚೂಪಾದ ಉಗುರುಗಳಿವೆ. ಬೇಟೆಯಾಡಿದ ಪ್ರಾಣಿಗಳನ್ನು ತಿನ್ನಲು ಗಟ್ಟಿಯಾದ ಹಲ್ಲುಗಳಿವೆ. ರಾತ್ರಿ ವೇಳೆ ನಿಶ್ಯಬ್ದವಾಗಿ ಆಹಾರವನ್ನು ಹುಡುಕುತ್ತಾ ಮೈಲುಗಟ್ಟಲೆ ಅಲೆದಾಡುತ್ತದೆ. ಹಗಲಿನ ಬಹು ಭಾಗ ನಿದ್ರಿಸುತ್ತದೆ. ಹುಲಿಗೆ ನೀರೆಂದರೆ ಪಂಚಪ್ರಾಣ. ಇದು ಒಳ್ಳೆಯ ಈಜು ಪ್ರಾಣಿ.

ಕರ್ನಾಟಕದಲ್ಲಿ ಬಂಡೀಪುರ, ನಾಗರಹೊಳೆ, ಭದ್ರಾ ಅಭಯಾರಣ್ಯ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಮತ್ತು ಕೊಡಗು ಜಿಲ್ಲೆಗಳ ಕಾಡುಗಳಲ್ಲಿ ಹುಲಿಗಳು ನೆಲೆಸಿವೆ. ಬೆಂಗಳೂರಿನ ಬನ್ನೇರುಘಟ್ಟ ಹಾಗೂ ಮೈಸೂರಿನ ಪ್ರಾಣಿ ಸಂಗ್ರಹಾಲಯಗಳಲ್ಲಿ ಹುಲಿಗಳನ್ನು ನೋಡಬಹುದು.

ಜುಲೈ ೯, ೧೯೭೨ರಂದು ನಮ್ಮ ಕೇಂದ್ರ ಸರ್ಕಾರ ಹುಲಿಯ ನಡಿಗೆ, ಗರ್ಜನೆ, ತೇಜಸ್ಸು ಇವುಗಳನ್ನು ಗುರುತಿಸಿ, ಇದು ರಾಷ್ಟ್ರದ ಪೌರುಷದ ಪ್ರತೀಕ ಎಂದು ತಿಳಿದು 'ರಾಷ್ಟ್ರೀಯ ಪ್ರಾಣಿ' ಎಂದು ಘೋಷಿಸಿತು.



## ಕೊಟ್ಟಿರುವ ಹುಲಿ ಚಿತ್ರಕ್ಕೆ ಬಣ್ಣ ಹಚ್ಚಿ





# ಅಭ್ಯಾಸ

**I. ಪದಗಳ ಅರ್ಥ ತಿಳಿಯಿರಿ.**

1. ಸಾಕುಪ್ರಾಣಿ = ಪಳಗಿಸಿದ ಪ್ರಾಣಿ (Trained Animal)
4. ಮಾಂಸ = ಬಾಡು (Meat)
5. ಉಗುರು = ನಖ (Nail)
6. ಪ್ರಾಣಿ ಸಂಗ್ರಹಾಲಯ = ಮೃಗಾಲಯ (Zoo)
7. ಅಲೆದಾಡು = ತಿರುಗಾಡು (Wander)
8. ಚೂಪಾದ = ಹರಿತವಾದ (Sharp)

**II. ಓದಿ ತಿಳಿಯಿರಿ, ಬರೆದು ಕಲಿಯಿರಿ.**

**ಸಾಕು ಪ್ರಾಣಿಗಳು**

ಹಸು, ಎಮ್ಮೆ, ಕುರಿ, ಮೇಕೆ,
ನಾಯಿ, ಕುದುರೆ, ಕತ್ತೆ.

**ಕಾಡು ಪ್ರಾಣಿಗಳು**

ಆನೆ, ಸಿಂಹ, ಹುಲಿ, ಚಿರತೆ,
ಕರಡಿ, ನರಿ, ತೋಳ, ಜಿರಾಫೆ, ಜಿಂಕೆ.

**III. ಬಿಟ್ಟಸ್ಥಳಗಳಲ್ಲಿ ಸರಿಯಾದ ಪದಗಳನ್ನು ಬರೆಯಿರಿ.**

1. ಗಂಡು ಹುಲಿ .................... ದಲ್ಲಿ ದೊಡ್ಡದಿರುತ್ತದೆ.
2. ಮೈಸೂರಿನ .................... ಹುಲಿಗಳನ್ನು ನೋಡಬಹುದು.
3. ಹುಲಿಯ ತೂಕ .................... ರಿಂದ .................... ಕಿಲೋಗ್ರಾಂಗಳು.
4. ಬೇಟೆಯಾಡಿದ ಪ್ರಾಣಿಗಳನ್ನು ತಿನ್ನಲು ಗಟ್ಟಿಯಾದ ....................

**IV. ಕೆಳಗಿನ ವಾಕ್ಯಗಳಲ್ಲಿ ಯಾವುದು ಸರಿ/ತಪ್ಪು ಎಂದುಗುರುತಿಸಿ. (✓ ✗)**

1. ನರಿ, ತೋಳಗಳು, ಸಾಕು ಪ್ರಾಣಿಗಳು. ☐
2. ಹುಲಿ ಸುಮಾರು ನಾಲ್ಕು ಮೀಟರ್‌ಗಳಷ್ಟು ಉದ್ದವಿರುತ್ತದೆ. ☐
3. ಹುಲಿಗೆ ಮಳೆಯೆಂದರೆ ಪಂಚಪ್ರಾಣ. ☐
4. ಹುಲಿಯನ್ನು ರಾಜ್ಯದ ಪ್ರಾಣಿ ಎಂದು ಘೋಷಿಸಲಾಯಿತು. ☐



## V. ನಿಮಗೆ ಗೊತ್ತಿರುವ ಪ್ರಾಣಿಗಳ, ಪಕ್ಷಿಗಳ ಹೆಸರುಗಳನ್ನು ಬರೆಯಿರಿ.

| ಪ್ರಾಣಿಗಳು | ಪಕ್ಷಿಗಳು. |
|---|---|
| ________ | ________ |
| ________ | ________ |
| ________ | ________ |
| ________ | ________ |
| ________ | ________ |
| ________ | ________ |
| ________ | ________ |
| ________ | ________ |

## VI. ಮಾದರಿಯಂತೆ ಬರೆಯಿರಿ.

ಮಾದರಿ: ಬೇಟೆ + ಆಡಲು = ಬೇಟೆಯಾಡಲು

1. ಪಟ್ಟೆಗಳು + ಇರುತ್ತವೆ = ________
2. ಆಹಾರ + ಅನ್ನು = ________
3. ಕರ್ನಾಟಕದ + ಅಲ್ಲಿ = ________
4. ಆಕರ್ಷಕ + ಆಗಿ = ________

## VII. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

1. ಪ್ರಾಣಿಗಳಲ್ಲಿರುವ ಎರಡು ವಿಧಗಳಾವುವು?

________

2. ಹುಲಿಯ ಮೈಮೇಲಿನ ಪಟ್ಟೆಯ ಬಣ್ಣಗಳಾವುವು?

________

3. ಹುಲಿಯ ನೋಟ ಹಾಗೂ ನಡಿಗೆ ಹೇಗಿರುತ್ತದೆ?

________

4. ಕರ್ನಾಟಕದ ಯಾವ ಯಾವ ಭಾಗಗಳಲ್ಲಿ ಹುಲಿಗಳು ನೆಲೆಸಿವೆ?

________

5. ಹುಲಿಯನ್ನು ರಾಷ್ಟ್ರೀಯ ಪ್ರಾಣಿಯೆಂದು ಯಾವಾಗ ಘೋಷಿಸಲಾಯಿತು?

________